ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1708/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮೊಹ್ಮದ್ ಹುಸೇನ್** | | |
| **ತಂದೆಃಹೆಸರು** | **ಖಾದರ್ ಬಾಷಾ** | **ಪಿಡಬ್ಲೂಃ** | **4** |
| **ವಯಸ್ಸು** | **43 ವರ್ಷ** | **ಸಿಡಬ್ಲೂಃ** | **6** |
| **ಉದ್ಯೋಗಃ** | **ವ್ಯಾಪಾರ** | | |
| **ವಾಸ ಸ್ಥಳಃ** | **ವಾಸ ನಟರಾಜ ಕಾಲೋನಿ, ಸಿಂಧನೂರು.** | | |

**ದಿನಾಂಕ 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ತಾಯಿ, ಚಾಸಾ-4 ನನ್ನ ತಂದೆ, ಚಾಸಾ-6 & 7 ನನ್ನ ತಮ್ಮಂದಿರು, ಚಾಸಾ-8 ರಿಂದ 10 ರವರ ಪರಿಚಯ ಇದೆ. ಆರೋಪಿತರು ನಮ್ಮ ಸಂಬಂಧಿಕರು.

ಸರ್ವೆ ನಂ.347/*/1 ರಲ್ಲಿ 3 ಎಕರೆ 30 ಗುಂಟೆ ಹೊಲ ಮುಕ್ಕುಂದ ಗ್ರಾಮದಲ್ಲಿದ್ದು, ಅದನ್ನು ನಾವು ಉಳುಮೆ ಮಾಡುತ್ತಿದ್ದೆವು. ನಮ್ಮ ಹೊಲದಲ್ಲಿ ನಾವು ನೆಲ್ಲು ಹಚ್ಚಿದ್ದು, ಅಲ್ಲಿ ಕೆಲಸ ಮಾಡುತ್ತಿದ್ದಾಗ ದಿ.01-12-2021 ರಂದು ಮ.12-30 ಕ್ಕೆ ನಾನು, ಚಾಸಾ-6, 1, 4 & 7 ರವರು ಹೋಗಿದ್ದಾಗ, ಆರೋಪಿತರು ಬಂದು, ನಮ್ಮ ಹೊಲದಲ್ಲಿ ಈ ಹೊಲ ನಮ್ಮದು ಎಂದರು. ಚಿನಾಲಿ, ಸೂಳೆ ಮಕ್ಕಳೆ, ಮಿಂಡ್ರಿಗುಟ್ಟಿದವರೆ ಎಂದು ಬೈದರು ಎಂದು ನಗುತಾ ಹೇಳುತ್ತಿದ್ದರು. 1 & 2 ನೇ ಆರೋಪಿತರು ನನ್ನ ತಂದೆಗೆ ಕಟ್ಟಿಗೆಯಿಂದ ಮೊಣಕಾಲಿಗೆ ಹೊಡೆದರು. 4 ನೇ ಆರೋಪಿತರು ನನ್ನ

ತಾಯಿಯ ಸೀರೆ ಹಿಡಿದು ಎಳೆದಾಡಿದರು. ಆರೋಪಿತರು ನಮಗೆಲ್ಲರಿಗೂ ಹೊಡೆ ಬಡೆ ಮಾಡಿದ್ದರು. ಈ ವಿಷಯದ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಾನು ಮು. ಮಾ. 1 ನ್ನು ನೋಡಿ ಇದೇ ಕಟ್ಟಿಗೆಯಿಂದ ಆರೋಪಿತರು ಹೊಡೆದಿದ್ದರು ಎನ್ನುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಆರೋಪಿತರು ನಿಮ್ಮ ಹೊಲದಲ್ಲಿ ಬಂದು ಚಾಸಾ-1 ರವರಿಗೆ ಲೇ ಸೂಳೆ ಎಂದು, ನಿನ್ನ ಗಂಡ & ಮಕ್ಕಳೊಂದಿಗೆ ಕೂಡಿಕೊಂಡು ಭತ್ತ ಕಟಾವು ಮಾಡಲು ಬಂದಿದ್ದೀಯಾ ಎಷ್ಟು ಸೊಕ್ಕು ನಿನಗೆ, ನಮಗೆ ಇನ್ನೂ ಆಸ್ತಿಯಲ್ಲಿ ಭಾಗ ಬರಬೇಕೆಂದು ಹೇಳಿ, 2 ನೇ ಆರೋಪಿ ಒಮ್ಮೆಲೆ ನನ್ನ ತಾಯಿಗೆ ಲೇ ಸೂಳೆ ಎಂದು ಬೈದು, ಎದೆ ಮೇಲೆ ಕೈ ಹಾಕಿದ್ದು, ಆಗ ಉಳಿದ ಆರೋಪಿತರು ನನ್ನ ತಾಯಿಯ ಸೀರೆ ಹಿಡಿದು ಎಳೆದಾಡಿ, ಲೇ ಸೂಳೆ ಜಾಸ್ತಿ ಮಾತನಾಡುತ್ತೀಯಾ ಎಂದು ಬೈದು, ಕೈಯಿಂದ ಬೆನ್ನಿಗೆ ಹೊಡೆದರು, ಅದರಲ್ಲಿ 1, 3 ನೇ ಆರೋಪಿತರು ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿದರು, ಆಗ ಚಾಸಾ-4, 6 & 7 & ನಾನು ಕೂಡಿ ಆಕೆಗೆ ಹೊಡೆಯುವುದನ್ನು ಬಿಡಿಸಿಕೊಳ್ಳಲು ಹೋದಾಗ 2 ನೇ ಆರೋಪಿ ಚಾಸಾ-4 ರವರಿಗೆ ಕೆಳಗೆ ನೂಕಿ, ಕಾಲಿನಿಂದ ಆತನಿಗೆ ಒದ್ದನು & ಎಡಗಾಲು ತಿರುವಿದನು & ಕಟ್ಟಿಗೆಯಿಂದ ಎಡಗಾಲಿಗೆ ಹೊಡೆದಿದ್ದು, 1 ನೇ ಆರೋಪಿ 2 ನೇ ಆರೋಪಿಯ ಕೈಯಲ್ಲಿದ್ದ ಕಟ್ಟಿಗೆ ತೆಗೆದುಕೊಂಡು ನನ್ನ ಎಡಗಣ್ಣಿನ ಕೆಳಭಾಗದಲ್ಲಿ ಹೊಡೆದಿದ್ದು, 3 & 2 ನೇ ಆರೋಪಿತರು ಚಾಸಾ-7 ರವರಿಗೆ ಕೈಗಳಿಂದ ಬೆನ್ನಿಗೆ & ಹೊಟ್ಟೆಗೆ ಗುದ್ದಿದ್ದು, ಒದ್ದಿರುತ್ತಾರೆ. ಆಗ ಚಾಸಾ-8 ರಿಂದ 10 ರವರು ಬಿಡಿಸಿಕೊಂಡಿದ್ದರು, ಆರೋಪಿತರು ಹೋಗುವಾಗ ಜೀವದ ಬೆದರಿಕೆ ಹಾಕಿ ಹೋಗಿದ್ದರು, ನಂತರ ನೀವು ಚಿಕಿತ್ಸೆ ಪಡೆದಿದ್ದಿರಿ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನನಗೆ ಘಟನಾ ಸ್ಥಳದ ಚೆಕ್ ಬಂದಿ ಹೇಳಲು ನೆನಪಿಲ್ಲ.

2. ನನಗೆ, ಚಾಸಾ-1, 4 & 6 ರವರಿಗೆ ರಕ್ತಗಾಯಗಳಾಗಿದ್ದವು. ಆ ರಕ್ತ ನಮ್ಮ ಬಟ್ಟೆಗಳ ಮೇಲೆ ಬಿದ್ದಿತ್ತು. ಅವುಗಳನ್ನು ಪೋಲೀಸರಿಗೆ ಕೊಟ್ಟಿದ್ದೆವು. ನನ್ನ ಕಣ್ಣಿಗೆ ರಕ್ತಗಾಯವಾಗಿತ್ತು. ನನ್ನ ತಮ್ಮನ ಬೆನ್ನಿಗೆ ರಕ್ತಗಾಯವಾಗಿತ್ತು. ನನ್ನ ಪ್ರಕಾರ ನನ್ನ ತಾಯಿಯ ಹಣೆಯ ಬಲಭಾಗದಲ್ಲಿ & ತಲೆಗೆ ರಕ್ತಗಾಯವಾಗಿತ್ತು. ನನ್ನ ತಂದೆಯ ಕಾಲಿಗೆ ಹೊಲಿಗೆಗಳು ಬಿದ್ದಿದ್ದವು.

3. ನಾನು & ನನ್ನ ಸಹೋದರ ಸಿಸ ಆಸ್ಪತ್ರೆಯಲ್ಲಿ 2 ದಿನ ದಾಖಲಾಗಿದ್ದೆವು. ನನ್ನ ತಂದೆ & ತಾಯಿಯೂ ಸಹ ಸಿ.ಸ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಒಂದೇ ದಿನ ಒಳರೋಗಿಗಳಾಗಿ ಪಡೆದಿದ್ದರು.

4. ನಿಮ್ಮ, ಚಾಸಾ-1, 4 & 6 ರವರ ಬಟ್ಟೆಗಳು ಹರಿದಿದ್ದವು. ಅವುಗಳನ್ನು ಪೋಲೀಸರಿಗೆ ನಾನೇ ಕೊಟ್ಟಿರುತ್ತೇನೆ. ಸದರಿ ಬಟ್ಟೆಗಳಿಗೆ ನಮ್ಮೆಲ್ಲರ ರಕ್ತ ಹತ್ತಿತ್ತು. ರಕ್ತ ನೆಲದ ಮೇಲೆ ಬಿದ್ದಿತ್ತು. ಅದನ್ನು ಪೋಲೀಸರು ಫೋಟೋ ತೆಗೆದು, ವೀಡಿಯೋ ಮಾಡಿಕೊಂಡಿದ್ದರು.

5. ನನ್ನ ತಾಯಿಯ ಬಳೆಗಳು ಹೊಡೆದಿದ್ದವು.

6. ನಾವೆಲ್ಲರೂ ಮೊದಲು ಆಸ್ಪತ್ರೆಗೆ ಹೋಗಿದ್ದೆವು, ಅಲ್ಲಿಗೆ ಪೋಲೀಸರು ಬಂದು ಠಾಣೆಗೆ ಕರೆದುಕೊಂಡು ಹೋಗಿದ್ದರು. ಮು. ಮಾ. 1 ನ್ನು ನಾನೇ ಪೋಲೀಸರಿಗೆ ಕೊಟ್ಟಿದ್ದೆ.

7. ಅಂದಿನಿಂದ ಇಂದಿನವರೆಗೂ ಪೋಲೀಸರು ನನ್ನನ್ನು ಭೇಟಿಯಾಗಿಲ್ಲ, ಆದರೆ ಸಾಕ್ಷಿ ಹೇಳಲು ಬಾ ಎಂದು ಮಾತ್ರ ಕರೆದಿದ್ದರು.

8. ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮ್ಮನ್ನು ಹೊಡೆದಿಲ್ಲ, ಬಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಗೆ ಕಾಲು ಮುರಿದಿತ್ತು, ರಾಣಿಬೆನ್ನೂರಿನಲ್ಲಿ ಚಿಕಿತ್ಸೆ ಪಡೆದಿದ್ದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**